

# ವಾರ್ WAR

> ತನ್ನ ವಿಚಾರಗಳನ್ನು ತಣ್ಣಗೇ ಮಂಡಿಸಲು ಸಾಧ್ಯವಿಲ್ಲದವನು ಚರ್ಚೆಯ ಕಾವಿನೊಳಗೂ ಗಟ್ಟಿಯಾಗಿ ನಿಲ್ಲಲಾರ.
>
> -ಫ್ರೆಡ್ರಿಚ್ ನೀಶೆ, ತತ್ವಶಾಸ್ತ್ರಜ್ಞ

ಅದಕ್ಕೂ ಸ್ವಲ್ಪ ಹುರುಳಿರಬೇಕು. ಒಂದಿಷ್ಟು ತರ್ಕವಿರಬೇಕು, ಜೊತೆಗೆ ಸತ್ಯ, ತೂಕ ಮತ್ತು ಸತ್ವವಿರಬೇಕು.

## ವಾದದ ಉದ್ದೇಶವೇನು?

ವಾದದ ಉದ್ದೇಶ ಒಂದು ಹೇಳಿಕೆಯಲ್ಲಿನ ಸತ್ಯಾಸತ್ಯತೆಯನ್ನು ಅಳೆಯುವುದು ಅಥವಾ ಕೆದಕುವುದು. ಆದರೆ ಅದು ಬರಿಯ ಪದಗಳ ಹೇಳಿಕೆಗೆ ಮಾತ್ರ ಸೀಮಿತವಲ್ಲ. ವಾದವನ್ನು ಒಂದು ಚಿತ್ರದ ಬಗ್ಗೆಯೂ ಮಾಡಬಹುದು. ಗಣಿತದ ಸೂತ್ರದ ಬಗ್ಗೆಯೂ ಮಾಡಬಹುದು. ಕಂಪ್ಯೂಟರ್ ವಿಜ್ಞಾನದ ಯಾವುದೋ ಒಂದು ಹೇಳಿಕೆಯ ಬಗ್ಗೆಯೂ ಮಾಡಬಹುದು.

ವಾದದ ಉದ್ದೇಶ ಒಂದು ವಿಚಾರದ ಬಗ್ಗೆ ನಮ್ಮ ನಿಲುವನ್ನು ಪ್ರಸ್ತುತ ಪಡಿಸುವುದು. ಅದನ್ನು ಅಲ್ಲಗಳೆಯುವ ಅಥವಾ ಅದರ ಬಗ್ಗೆ ಸಂದೇಹ ವ್ಯಕ್ತಪಡಿಸುವ ಪ್ರತಿವಾದ ಆ ವಿಷಯಕ್ಕೆ ಇರುವ ಇತರೆ ಮುಖಗಳನ್ನು ಹೊರಹಾಕುವುದು. ಹೀಗೆ ವಾದ ವಾಗ್ವಾದಗಳು ಸತ್ಯವೆಂಬ ಸೂರ್ಯ ಇರುವ ದಿಕ್ಕಿನಲ್ಲಿ ಅರಳುತ್ತ ಹೋಗುವ ಸೂರ್ಯಕಾಂತಿಯ ಹಾಗೆ.

## ವಾದಗಳೆಲ್ಲ ಜಗಳಗಳಲ್ಲ

ಕೆಲವರು, ವಾದವೆಂದರೆ ಜಗಳ ಮಾಡುವುದು ಎಂದು ಭಾವಿಸುತ್ತಾರೆ. ನಿಜವಾದ ವಾದಗಳು ಜಗಳಗಳನ್ನು ಸೃಷ್ಟಿಸುವುದಿಲ್ಲ. ವಾದದಿಂದ ಶುರುವಾದದ್ದೆಲ್ಲ ಜಗಳದಲ್ಲಿ ಕೊನೆಯಾಗಬೇಕೆಂದೇನೂ ಇಲ್ಲ. ವಾದಗಳನ್ನು ಜಗಳಗಳೆಂದು ದೂಷಿಸುವುದು ತಪ್ಪಾಗುತ್ತದೆ. ಆದರೆ ವಾದಗಳು ಹಳಿತಪ್ಪಿದಾಗ ಜಗಳಗಳು ನಡೆಯುತ್ತವೆ. ಈ ಕಾರಣಕ್ಕೆ ಬಹಳಷ್ಟು ಮಂದಿ ಚರ್ಚೆಗೆ ಹಿಂಜರಿಯುತ್ತಾರೆ. ಮತ್ತೆ ಕೆಲವರು ತಮ್ಮ ಸ್ವಂತ ದೃಷ್ಟಿಕೋನವನ್ನು ಮಾತ್ರ ಪ್ರೀತಿಸುವವರು. ಅವರು ಸಂವಾದವನ್ನು ಸಂವಾದದಂತೆ ನೋಡದೆ, ವಿರೋಧ ಎಂದು ವೈಯಕ್ತಿಕವಾಗಿ ತೆಗೆದುಕೊಳ್ಳುತ್ತಾರೆ.

ಇದೆಲ್ಲಕ್ಕೂ ಕಾರಣವೆಂದರೆ ಸಂವಾದದ ಬಗ್ಗೆ ಮತ್ತು ವಾದಿಸುವ ಕಲೆಯ ಬಗ್ಗೆ ನಮಗೆ ತಿಳಿದಿಲ್ಲದಿರುವುದೇ ಆಗಿದೆ. ವಾಸ್ತವದಲ್ಲಿ ವಾದಗಳು ಜನರನ್ನು, ಸಮಾಜವನ್ನು, ಆಡಳಿತವನ್ನು ರೂಪಿಸಬಲ್ಲ ಆರೋಗ್ಯಕರ ಸಾಧನೆಗಳು. ಎಲ್ಲ ಜ್ಞಾನಶಾಖೆಗಳ ಬೆಳವಣಿಗೆಯಲ್ಲಿಯೂ ಇವು ಬಹಳ ಮುಖ್ಯಪಾತ್ರವನ್ನು ವಹಿಸುತ್ತವೆ.